**ಸಾಕ್ಷಿಗೆ ದಿನಾಂಕಃ 03.12.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರವಾಗಿ,ಶ್ರೀ ಜಿ.ಪಿ.ಆರ್ ವಕೀಲರಿಂದಃ**

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಕಂದಾಯ ಪಾವತಿ ರಶೀದಿ |
| ನಿ.ಪಿ.–2 | ಸ್ವಯಂ ಆಸ್ತಿ ತೆರಿಗೆ ನಿರ್ಧಾರಣ ನಮೂನೆ |
| ನಿ.ಪಿ.–3 ಮತ್ತು 4 | ಪೌರಯುಕ್ತರಿಗೆ ಕೊಟ್ಟಿದ್ದ ಅರ್ಜಿಗಳು |
| ನಿ.ಪಿ.–5 | ತಹಶೀಲ್ದಾರ್ ರವರಿಗೆ ಕೊಟ್ಟಿದ್ದ ಅರ್ಜಿ |
| ನಿ.ಪಿ.–6 | ಆಯುಕ್ತರಿಗೆ ಕೊಟ್ಟಿದ್ದ ಅರ್ಜಿ |
| ನಿ.ಪಿ.–7 ರಿಂದ 11 | ಫೋಟೋಗಳು |
| ನಿ.ಪಿ.–12 | ಸಿ.ಡಿ |
| ನಿ.ಪಿ.–13 | ದಿಃ 20.06.1990 ರ ಹಕ್ಕು ವರ್ಗಾವಣೆ ಪತ್ರ (ಪ್ರತಿವಾದಿ ವಕೀಲರ ತಕಾರರಿಗೆ ಒಳಪಟ್ಟು ಗುರುತಿಸಿದೆ) |
| ನಿ.ಪಿ.–14 | ದಿಃ 20.06.1990 ರ ನೊಂದಯಿತ ಕ್ರಯ ಪತ್ರ |
| ನಿ.ಪಿ.–15 | ಕಂದಾಯ ಪಾವತಿ ರಶೀದಿ |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ.**